# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ನಾಗಪ್ಪ ಭಜಂತ್ರಿ | ಫ್ರಾ.ಸಾ-13 |
| ತಂದೆಯ ಹೆಸರು | : | ಬಸಪ್ಪ | ಚಾಸಾ-27 |
| ವಯಸ್ಸು | : | 58 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಮಹಾಂತಪುರ | |

ದಿಃ 19.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಶಾಂತಪ್ಪ, ಚಾಸಾ-1/ಮೂರ್ತೆಪ್ಪ ನನಗೆ ಗೊತ್ತು. ನ್ಯಾಯಾಲಯದ ಮುಂದೆ ವಿ.ಸಿ ಮೂಲಕ ಹಾಜರಿರುವ 2 ನೇ ಆರೋಪಿ/ಹುಲಗವ್ವ ಮೃತ ಶಾಂತಪ್ಪನ ಹೆಂಡತಿ. ಶಾಂತಪ್ಪ ಮತ್ತು ಹುಲಗವ್ವ ಮೊದಲು ಗೋವಾ ರಾಜ್ಯಕ್ಕೆ ದುಡಿಯಲು ಹೋಗಿದ್ದರು. ನ್ಯಾಯಾಲಯದ ಮುಂದೆ ವಿ.ಸಿ ಮೂಲಕ ಹಾಜರುಪಡಿಸಿರುವ 1 ನೇ ಆರೋಪಿ/ಬಸಾರಾಜ ಹಾಗೂ 3 ನೇ ಆರೋಪಿ/ನಿಂಗಪ್ಪ ನನಗೆ ಗೊತ್ತು. 1 ನೇ ಆರೋಪಿ/ಬಸವರಾಜ ಸಹ ಗೋವಾ ರಾಜ್ಯಕ್ಕೆ ದುಡಿಯಲು ಹೋಗಿದ್ದನು. ಸ್ವಲ್ಪ ವರ್ಷಗಳ ನಂತರ ಮೃತ ಶಾಂತಪ್ಪ ಮತ್ತು ಆತನ ಊರಿಗೆ ವಾಪಸ್ಸು ಬಂದು ಒಕ್ಕಲುತನ ಮಾಡಿಕೊಂಡು ವಾಸವಾಗಿದ್ದರು. ಇದಾದ ಸ್ವಲ್ಪ ದಿನಗಳ ನಂತರ 1 ನೇ ಆರೋಪಿ/ಬಸವರಾಜ ಸಹ ಊರಿಗೆ ವಾಪಸ್ಸು ಬಂದಿದ್ದನು. ಆ ಸಮಯದಲ್ಲಿ ಊರಿನಲ್ಲಿ 1 ನೇ ಆರೋಪಿ ಮತ್ತು 2 ನೇ ಆರೋಪಿತಳ ಮಧ್ಯ ಅನೈತಿಕ ಸಂಬಂಧ ಇರುತ್ತದೆ ಎಂದು ಸುದ್ದಿ ಹರಡಿತ್ತು.

2. ಈಗ ಅಂದಾಜು ಎರಡುವರೆ ವರ್ಷಗಳ ಹಿಂದೆ ರಾತ್ರಿ 9-30 ಗಂಟೆ ಸುಮಾರಿಗೆ ನಾನು ಬಹಿರ್ದೆಸೆಗೆ ಹೊರಟಿದ್ದೆ. ಆ ಸಮಯಕ್ಕೆ 1 ನೇ ಆರೋಪಿ/ಬಸವರಾಜ, 3 ನೇ

ಆರೋಪಿ/ನಿಂಗಪ್ಪ ಹಾಗೂ ನ್ಯಾಯಾಲಯದ ಮುಂದಿರುವ 4 ನೇ ಆರೋಪಿ/ರಮೇಶ ಮತ್ತು 5 ನೇ ಆರೋಪಿ/ಹನಮಂತ ರವರು ನಮ್ಮ ಊರಿನ ದುರ್ಗಾದೇವಿ ಗುಡಿ ಕಟ್ಟೆಯ ಬಳಿ ಕುಳಿತಿದ್ದರು. 4 ಮತ್ತು 5 ನೇ ಆರೋಪಿತರು ತುಂಬ ಗ್ರಾಮದ ವಾಸಿಗಳು. ನಮ್ಮ ಊರಿನಿಂದ ತುಂಬ ಗ್ರಾಮಕ್ಕೆ ಸುಮಾರು 1 ಕಿ.ಮೀ ಅಂತರ ಇರುತ್ತದೆ. ನಾನು ಬಹಿರ್ದೆಸೆ ಮುಗಿಸಿಕೊಂಡು ವಾಪಸ್ಸು ಮನೆಗೆ ಹೋಗುತ್ತಿದ್ದಾಗಲೂ ಸಹ 1, 3, 4 ಮತ್ತು 5 ನೇ ಆರೋಪಿತರು ಅಲ್ಲಿಯೇ ಕುಳಿತಿದ್ದರು. ಇದಾದ ಮರುದಿನ ಶಾಂತಪ್ಪ ಕಾಣೆಯಾಗಿರುತ್ತಾನೆ ಎಂದು ತಿಳಿದು ಬಂದಿತು. ಇದಾದ ಒಂದು ತಿಂಗಳ ನಂತರ ಪೊಲೀಸರು ನನಗೆ ಆರೋಪಿತರೆಲ್ಲರೂ ಸೇರಿ ಶಾಂತಪ್ಪನನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿತರ ಪರ**

ದುರ್ಗಾದೇವಿ ಗುಡಿ ಹತ್ತಿರ ಮುಳ್ಳು ಕಂಟಿಗಳು ಬೆಳೆದಿರುತ್ತವೆ ಎಂದರೆ ಸರಿ. ಸದರಿ ಗುಡಿ ಹತ್ತಿರ ಹೆಣ್ಣು ಮಕ್ಕಳು ಬಹಿರ್ದೆಸೆಗೆ ಹೋಗುತ್ತಾರೆ ಎಂದರೆ ಸರಿ. ಸದರಿ ಗುಡಿ ಹತ್ತಿರ ಹುಸೇನಮ್ಮ ಎನ್ನುವವರ ಮನೆ ಇದ್ದು, ಆ ಮನೆ ಹತ್ತಿರ ಗಂಡಸರೆಲ್ಲರೂ ಬಹಿರ್ದೆಸೆಗೆ ಹೋಗುತ್ತಾರೆ ಎಂದರೆ ಸರಿಯಲ್ಲ. ಬಹಿರ್ದೆಸೆಗೆ ಹೋಗುವ ಸ್ಥಳದಿಂದ ಗುಡಿಯ ಹತ್ತಿರ ಇದ್ದ ವ್ಯಕ್ತಿಗಳು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನಾನು 1, 3, 4 ಮತ್ತು 5 ನೇ ಆರೋಪಿತರನ್ನು ಗುಡಿ ಹತ್ತಿರ ನೋಡಿದಾಗ ಅವರನ್ನು ನಾನು ಮಾತನಾಡಿಸಿರುವುದಿಲ್ಲ. ನಾನು 1, 3 ರಿಂದ 5 ನೇ ಆರೋಪಿತರನ್ನು ಸುಮಾರು 20 ಅಡಿ ದೂರದಿಂದ ನೋಡಿರುತ್ತೇನೆ. ಸದರಿ ದಿನ 1, 3 ರಿಂದ 5 ನೇ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ಹೇಳಲು ಆಗುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ಚಾಸಾ-1/ಮೂರ್ತೆಪ್ಪ ರವರ ಜೊತೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1/ಮೂರ್ತೆಪ್ಪ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಶಾಂತಪ್ಪ ಕಾಣೆಯಾದ ವಿಷಯ

ತಿಳಿದು 1, 3 ರಿಂದ 5 ನೇ ಆರೋಪಿತರು ಗುಡಿ ಬಳಿ ಕುಳಿತಿದ್ದ ವಿಚಾರವನ್ನು ಚಾಸಾ-1 ರವರಿಗೆ ನಾನು ಅದೇ ದಿನ ತಿಳಿಸಿರುವುದಿಲ್ಲ.

2. 1 ಮತ್ತು 2 ನೇ ಆರೋಪಿತರ ಮಧ್ಯ ಅನೈತಿಕ ಸಂಬಂಧ ಸುದ್ದಿ ಹರಡಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಪೊಲೀಸರು ನಮ್ಮ ಊರಿಗೆ ಬಂದಿದ್ದಾಗ ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸದರಿ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನನ್ನನ್ನು ವಿಚಾರಣೆ ಮಾಡಿದಾಗ ಒಬ್ಬರೆ ಪೊಲೀಸರು ಇದ್ದರು. ನಾನು 1, 3 ರಿಂದ 5 ನೇ ಆರೋಪಿತರನ್ನು ದುರ್ಗಾದೇವಿ ಗುಡಿ ಬಳಿ ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1, 3 ರಿಂದ 5 ನೇ ಆರೋಪಿತರು ದುರ್ಗಾದೇವಿ ಗುಡಿ ಹತ್ತಿರ ಯಾವುದೇ ದಿನಾಂಕ ಬಂದಿರುವುದಿಲ್ಲ ಹಾಗೂ ನಾನು ಅವರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : ಬಸವ್ವ ಮಾದರ | | ಫ್ರಾ.ಸಾ-12 |
| ಗಂಡನ ಹೆಸರು | : ಶಂಕ್ರೆಪ್ಪ | | ಚಾಸಾ-17 |
| ವಯಸ್ಸು | : 48 ವರ್ಷ | | |
| ಉದ್ಯೋಗ | : ಗೃಹಿಣಿ | | |
| ವಿಳಾಸ | : ಗೋವಾ | | |

ದಿಃ 19.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನಮ್ಮ ತವರು ಊರು ಮಹಾಂತಪುರ. ಮೃತ ಶಾಂತಪ್ಪ ನನ್ನ ತಮ್ಮ. 2 ನೇ ಆರೋಪಿ/ಹುಲಗೆವ್ವ ನನ್ನ ಮಗಳು. ನನ್ನ ಮಗಳು ಹುಲಗೆವ್ವಳನ್ನು ನನ್ನ ತಮ್ಮ ಶಾಂತಪ್ಪನಿಗೆ ಸುಮಾರು 24 ವರ್ಷಗಳ ಹಿಂದೆ ಕೊಟ್ಟು ಮದುವೆ ಮಾಡಿರುತ್ತೇನೆ. ಅವರ ದಾಂಪತ್ಯದಿಂದ ಅವರಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಚಾಸಾ-10/ಆಕಾಶ ಮತ್ತು ಚಾಸಾ-11/ಅಕ್ಷತಾ. ಮೃತ ಶಾಂತಪ್ಪ ತನ್ನ ಕುಟುಂಬಸಮೇತವಾಗಿ ಗೋವಾದಲ್ಲಿ ಕೆಲಸ ಮಾಡುತ್ತಿದ್ದನು. 1 ನೇ ಆರೋಪಿ/ಬಸವರಾಜ ನನ್ನ ಅಕ್ಕ ಚಾಸಾ-18/ಯಮನವ್ವ ರವರ ಮಗ. 1 ನೇ ಆರೋಪಿ ಸಹ ದುಡಿಯಲು ಗೋವಾ ರಾಜ್ಯಕ್ಕೆ ಬಂದಿದ್ದನು. 1 ನೇ ಆರೋಪಿ ಬಸವರಾಜ ಗೋವಾ ರಾಜ್ಯಕ್ಕೆ ಬಂದ ನಂತರ ಆತನಿಗೂ ಮತ್ತು ನನ್ನ ಮಗಳು 2 ನೇ ಆರೋಪಿ/ಹುಲಗವ್ವ ರವರ ಮಧ್ಯ ಅನೈತಿಕ ಸಂಬಂಧ ಇರುತ್ತದೆ ಎಂದು ಸುದ್ದಿ ಹರಡಿತು. ಆ ಸಮಯದಲ್ಲಿ ನಾನು, ಚಾಸಾ-12, ಚಾಸಾ-13, ಚಾಸಾ-14 ಮತ್ತು ಚಾಸಾ-16 ರವರು ಬುದ್ಧಿ ಹೇಳಿದ್ದರೂ ಸಹ ಅವರು ಸುಧಾರಿಸಲಿಲ್ಲ.

2. ನಂತರ ಶಾಂತಪ್ಪ ತನ್ನ ಹೆಂಡತಿ/ಹುಲಗವ್ವ ಹಾಗೂ ಮಗಳನ್ನು ಕರೆದುಕೊಂಡು ತನ್ನ ಊರಾದ ಮಹಾಂತಪುರ ಕ್ಕೆ ಬಂದು ವಾಸವಾಗಿದ್ದನು. ಆ ಸಮಯದಲ್ಲಿ ಅವರ ಮಗ ನಮ್ಮ ಜೊತೆ ಗೋವಾ ರಾಜ್ಯದಲ್ಲಿ ವಾಸವಾಗಿದ್ದನು. ಇದಾದ ಸ್ವಲ್ಪ ದಿನಗಳ ನಂತರ 1 ನೇ ಆರೋಪಿ/ಬಸವರಾಜ ಸಹ ಗೋವಾ ರಾಜ್ಯದಿಂದ ಮಹಾಂತಪೂರಕ್ಕೆ ಹೋಗಿರುತ್ತಾನೆ. ನಂತರ

ನಮಗೆ 1 ನೇ ಆರೋಪಿ ಮೊದಲಿನಂತೆ 2 ನೇ ಆರೋಪಿ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿರುತ್ತಾನೆ ಎಂದು ತಿಳಿದು ಬಂತು.

3. ಸುಮಾರು ಎರಡುವರೆ ವರ್ಷಗಳ ಹಿಂದೆ ನನ್ನ ತಮ್ಮ ಚಾಸಾ-1 ರವರಿಂದ ನನ್ನ ತಮ್ಮ/ಶಾಂತಪ್ಪ ರವರು ಕಾಣೆಯಾಗಿರುತ್ತಾರೆ ಎಂದು ತಿಳಿದು ಬಂತು. ಇದಾದ ಒಂದು ತಿಂಗಳ ನಂತರ ಶಾಂತಪ್ಪ ರವರನ್ನು ಆರೋಪಿತರೆಲ್ಲರೂ ಸೇರಿ ಕೊಲೆ ಮಾಡಿರುತ್ತಾರೆ ಎಂದು ತಿಳಿದು ಬಂದಿತು. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ**ತರ **ಪರ**

ಗೋವಾ ರಾಜ್ಯದಲ್ಲಿ ಮೃತ ಶಾಂತಪ್ಪ ಮತ್ತು 2 ನೇ ಆರೋಪಿ ವಾಸವಾಗಿದ್ದಾಗ ಅವರು ಸಂಬಂಧ ಅನ್ಯೋನ್ಯವಾಗಿತ್ತು. ಅವರ ಮಗ ಆ ಸಮಯದಲ್ಲಿ ಕಾಲೇಜಗೆ ಹೋಗುತ್ತಿದ್ದು ಆತನಿಗೆ ತಿಳುವಳಿಕೆ ಇತ್ತು ಎಂದರೆ ಸರಿ. ಶಿವಾನಂದ ಎನ್ನುವವರು ನನ್ನ ಮಗ, ಆತನೂ ಸಹ ಗೋವಾ ರಾಜ್ಯದಲ್ಲಿ ವಾಸವಾಗಿರುತ್ತಾರೆ. ಆತನಿಗೆ ಸ್ವಲ್ಪ ತಿಳುವಳಿಕೆ ಕಡಿಮೆ ಇರುತ್ತದೆ ಎಂದರೆ ಸರಿ. ಶಿವಾನಂದನಿಗೆ ಮೃತ ಶಾಂತಪ್ಪನ ಮಗಳು ಚಾಸಾ-11/ಅಕ್ಷತಾ ರವರನ್ನು ಕೊಟ್ಟು ಮದುವೆ ಮಾಡಲು ನಿಶ್ಚಯವಾಗಿರುತ್ತದೆ ಎಂದರೆ ಸರಿ. ನನ್ನ ಮಗನಿಗೆ ಈಗ ಸುಮಾರು 28 ವರ್ಷ ವಯಸ್ಸು. ಚಾಸಾ-11/ಅಕ್ಷತಾ ರವರಿಗೆ ಈಗ ಸುಮಾರು 16-17 ವರ್ಷ ಇರಬಹುದು.

2. ಮಹಾಂತಪುರದಲ್ಲಿ ಶಾಂತಪ್ಪ ಮತ್ತು ಹುಲಗೆವ್ವ ವಾಸವಾಗಿದ್ದ ಶೆಡ್ ನ ಮನೆಯನ್ನು ನಾನು ನೋಡಿರುತ್ತೇನೆ. ಸದರಿ ಶೆಡ್ ನಲ್ಲಿ ಅಡುಗೆ ಮಾಡಲು ಪ್ರತ್ಯೇಕವಾಗಿ ಒಂದು ಭಾಗಮಾಡಿಕೊಳ್ಳಲಾಗಿದೆ ಎಂದರೆ ಸರಿ. ಸದರಿ ಅಡುಗೆ ಮನೆಯಲ್ಲಿ ಕುಳಿತುಕೊಂಡರೆ ಪಡಸಾಲೆಯಲ್ಲಿ ಇರುವವರು ಕಾಣುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು 2 ನೇ ಆರೋಪಿ/ಹುಲಗೆವ್ವ ಚಾಸಾ-11 ರವರನ್ನು ಶಿವಾನಂದ ರವರಿಗೆ ಕೊಟ್ಟು ಮದುವೆ ಮಾಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು 2 ನೇ ಆರೋಪಿ ಚಾಸಾ-11 ರವರನ್ನು ಶಿವಾನಂದ ರವರಿಗೆ ಕೊಟ್ಟು ಮದುವೆ ಮಾಡಲು ಒಪ್ಪದೆ ಇದ್ದ ಕಾರಣದಿಂದ ನನಗೂ ಮತ್ತು ಆಕೆಗೂ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ.

3. ಶಾಂತಪ್ಪ ಊರಿಗೆ ಬಂದ ನಂತರ ಒಕ್ಕಲುತನ ಮಾಡಿಕೊಂಡು ತನ್ನ ಕುಟುಂಬದ ಸಮೇತ ವಾಸವಾಗಿದ್ದನು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಮ್ಮ ಚಾಸಾ-1/ಮೂರ್ತೆಪ್ಪ ಇಲಕಲ್ಲದಲ್ಲಿ ಕೆಲಸ ಮಾಡಲು ಹೋಗುತ್ತಿದ್ದನು ಎಂದರೆ ಸರಿ. ಈ ಕಾರಣದಿಂದ ಚಾಸಾ-1 ರವರಿಗೆ ಒಕ್ಕಲುತನ ಕೆಲಸ ಮಾಡಲು ಅನಾನುಕೂಲವಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ 2 ನೇ ಆರೋಪಿ/ ಹುಲಗೆವ್ವ ಆಕೆಯ ಗಂಡನ ಜಮೀನನ್ನು ಆಕೆಗೆ ಕೊಡುವಂತೆ ಚಾಸಾ-1 ಮತ್ತು ನನಗೆ ಬೇಡಿಕೆ ಇಟ್ಟಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು ನಾನು 2 ನೇ ಆರೋಪಿಗೆ ಆಸ್ತಿ ಕೊಡುವುದಿಲ್ಲ ಎಂದು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಈ ಕಾರಣದಿಂದ 2 ನೇ ಆರೋಪಿತಳ ಮೇಲೆ ಸಿಟ್ಟಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿ ಬಸವರಾಜ 2 ನೇ ಆರೋಪಿಗೆ ಆಸ್ತಿ ಕೊಡುವಂತೆ ಅವರ ಪರವಾಗಿ ಮಾತನಾಡಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು ನಾನು 1 ಮತ್ತು 2 ನೇ ಆರೋಪಿತರ ವಿರುದ್ಧ ಸಿಟ್ಟಾಗಿ ಅವರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ಮೇರೆಗೆ 4 ಮತ್ತು 5 ನೇ ಆರೋಪಿತರ ಹೆಸರು ನನಗೆ ತಿಳಿದು ಬಂದಿರುತ್ತದೆ. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ಪರಸಪ್ಪ ಮಾದರ | ಫ್ರಾ.ಸಾ-11 |
| ತಂದೆಯ ಹೆಸರು | : | ಸಂಗನಬಸಪ್ಪ | ಚಾಸಾ-14 |
| ವಯಸ್ಸು | : | 31 ವರ್ಷ | |
| ಉದ್ಯೋಗ | : | ಚಾಲಕ | |
| ವಿಳಾಸ | : | ಗೋವಾ | |

ದಿಃ 19.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನಮ್ಮ ಸ್ವಂತ ಊರು ಮಹಾಂತಪುರ. ನಾನು ಕಳೆದ 10 ವರ್ಷಗಳಿಂದ ಗೋವಾ ರಾಜ್ಯದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಮೃತ ಶಾಂತಪ್ಪ ನನ್ನ ಚಿಕ್ಕಪ್ಪ. 2 ನೇ ಆರೋಪಿ ಮೃತ ಶಾಂತಪ್ಪನ ಹೆಂಡತಿ. ಅವರ ದಾಂಪತ್ಯದಿಂದ ಅವರಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಚಾಸಾ-10/ಆಕಾಶ ಮತ್ತು ಚಾಸಾ-11/ಅಕ್ಷತಾ. ಮೃತ ಶಾಂತಪ್ಪ ತನ್ನ ಕುಟುಂಬಸಮೇತವಾಗಿ ಗೋವಾದಲ್ಲಿ ಕೆಲಸ ಮಾಡುತ್ತಿದ್ದನು. 1 ನೇ ಆರೋಪಿ/ಬಸವರಾಜ ನನ್ನ ಹೆಂಡತಿ ಗೌರಮ್ಮ ರವರ ಅಣ್ಣ. 1 ನೇ ಆರೋಪಿ ಸಹ ದುಡಿಯಲು ಗೋವಾ ರಾಜ್ಯಕ್ಕೆ ಬಂದಿದ್ದನು. 1 ನೇ ಆರೋಪಿ/ಬಸವರಾಜ ಶಾಂತಪ್ಪ ರವರ ಮನೆಯ ಹತ್ತಿರ ಮನೆ ಮಾಡಿಕೊಂಡು ಗೋವಾರಾಜ್ಯದಲ್ಲಿ ವಾಸವಾಗಿದ್ದಾಗ 2 ನೇ ಆರೋಪಿ/ಹುಲಗವ್ವ ರವರ ಜೊತೆ ಅನೈತಿಕ ಸಂಬಂಧ ಬೆಳೆಸಿಕೊಂಡಿದ್ದನು. ಈ ವಿಚಾರ ನಮಗೆ ತಿಳಿದು ಬಂದಾಗ, ನಾನು, ಚಾಸಾ-12, ಚಾಸಾ-13 ಹಾಗೂ ಚಾಸಾ-16 ರವರು ಸೇರಿ 1 ನೇ ಆರೋಪಿ/ಬಸವರಾಜಗೆ ಬುದ್ದಿವಾದ ಹೇಳಿದರೂ ಸಹ 1 ನೇ ಆರೋಪಿ ಸುಧಾರಿಸಲಿಲ್ಲ.

2. ನಂತರ ಶಾಂತಪ್ಪ ತನ್ನ ಹೆಂಡತಿ ಹಾಗೂ ಮಗಳನ್ನು ಕರೆದುಕೊಂಡು ತನ್ನ ಊರಾದ ಮಹಾಂತಪುರ ಕ್ಕೆ ಬಂದು ವಾಸವಾಗಿದ್ದನು. ಇದಾದ ಸ್ವಲ್ಪ ದಿನಗಳ ನಂತರ 1 ನೇ ಆರೋಪಿ/ಬಸವರಾಜ ಸಹ ಗೋವಾ ರಾಜ್ಯದಿಂದ ತನ್ನ ಊರಾದ ಮಹಾಂತಪೂರಕ್ಕೆ ಹೋಗಿರುತ್ತಾನೆ. ನಂತರ ನಮಗೆ 1 ನೇ ಆರೋಪಿ ಮೊದಲಿನಂತೆ 2 ನೇ ಆರೋಪಿ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿರುತ್ತಾನೆ ಎಂದು ತಿಳಿದು ಬಂದಿತು.

3. ದಿಃ 22.10.2022 ರಂದು ನನ್ನ ಚಿಕ್ಕಪ್ಪ ಶಾಂತಪ್ಪ ರವರು ಕಾಣೆಯಾಗಿರುತ್ತಾರೆ ಎಂದು ತಿಳಿದು ಬಂದಿತು. ಇದಾದ ಒಂದು ತಿಂಗಳ ನಂತರ ಶಾಂತಪ್ಪ ರವರನ್ನು ಆರೋಪಿತರೆಲ್ಲರೂ ಸೇರಿ ಕೊಲೆ ಮಾಡಿರುತ್ತಾರೆ ಎಂದು ತಿಳಿದು ಬಂದಿತು.

4. 1 ನೇ ಆರೋಪಿ ಬಸವರಾಜ ಗೋವಾ ರಾಜ್ಯಕ್ಕೆ ದುಡಿಯಲು ಬಂದಿದ್ದಾಗ ನಾನು ನನ್ನ ಆಧಾರ ಕಾರ್ಡ ಉಪಯೋಗಿಸಿಕೊಂಡು 1 ನೇ ಆರೋಪಿಗೆ ಐಡಿಯಾ ಕಂಪೆನಿಯ ಒಂದು ಸಿಮ್ ಕಾರ್ಡನ್ನು ಖರೀದಿ ಮಾಡಿ ಕೊಟ್ಟಿದ್ದೆನು. ಸದರಿ ಮೊಬೈಲ್ ಸಿಮ್ ನಂ. 7776955688. ಈ ಮೊಬೈಲ ಸಿಮ್ ನಂಬರನ್ನು 1 ನೇ ಆರೋಪಿ ಉಪಯೋಗಿಸುತ್ತಿದ್ದನು. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿತರ ಪರ**

ಗೋವಾ ರಾಜ್ಯದಲ್ಲಿ ಮೃತ ಶಾಂತಪ್ಪ ಮತ್ತು 2 ನೇ ಆರೋಪಿ ವಾಸವಾಗಿದ್ದಾಗ ಅವರು ಸಂಬಂಧ ಅನ್ಯೋನ್ಯವಾಗಿತ್ತು. ಅವರ ಮಗ ಆ ಸಮಯದಲ್ಲಿ ಕಾಲೇಜಗೆ ಹೋಗುತ್ತಿದ್ದು ಆತನಿಗೆ ತಿಳುವಳಿಕೆ ಇತ್ತು ಎಂದರೆ ಸರಿ. 1 ನೇ ಆರೋಪಿ/ಬಸರಾಜ ಶಾಂತಪ್ಪ ರವರ ಮನೆ ಹತ್ತಿರ ಮನೆ ಮಾಡಿಕೊಂಡಿದ್ದಾಗ ಆತನು ತನ್ನ ಮನೆಯಲ್ಲಿ ಒಬ್ಬನೆ ವಾಸವಾಗಿದ್ದನು. ಈ ವಿಚಾರವನ್ನು ನಾನು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ.

2. ಚಾಸಾ-13/ಬಸಪ್ಪ ಮಾದರ ರವರು ಮಹಾಂತಪುರದಲ್ಲಿ ವಾಸವಾಗಿರುತ್ತಾರೆ. 1 ನೇ ಆರೋಪಿ ಮತ್ತು 2 ನೇ ಆರೋಪಿತರ ಮಧ್ಯ ಇದ್ದ ಅನೈತಿಕ ವಿಚಾರವನ್ನು ನನ್ನ ಹೆಂಡತಿ/ಗೌರಮ್ಮ ನನಗೆ ತಿಳಿಸಿರುತ್ತಾರೆ. ಸದರಿ ವಿಚಾರ ನನ್ನ ಹೆಂಡತಿಗೆ 2021 ರಲ್ಲಿ ತಿಳಿದುಬಂದಿತು. ಈ ವಿಚಾರ ನಮಗೆ ತಿಳಿದುಬಂದ ನಂತರ ನಾವು 1 ನೇ ಆರೋಪಿಗೆ ಬುದ್ಧಿವಾದ ಹೇಳಿರುತ್ತೇವೆ. ಸದರಿ ವಿಚಾರವನ್ನು ನಾನು 1 ನೇ ಆರೋಪಿಯ ತಂದೆ-ತಾಯಿಗೆ ಮತ್ತು ಅವರ ಸಂಬಂಧಿಕರಿಗೆ ತಿಳಿಸಿರುವುದಿಲ್ಲ.

3. ಶಾಂತಪ್ಪ ಮಹಾಂತಪುರ ಊರಿಗೆ ವಾಪಸ್ಸು ಹೋದ ನಂತರ ಒಕ್ಕಲುತನ ಮತ್ತು ಕೂಲಿ ಮಾಡಿಕೊಂಡಿ ಇದ್ದನು. ಸದರಿ ಸಮಯದಲ್ಲಿ ಚಾಸಾ-1, ಮತ್ತು ನಮ್ಮ ಜಮೀನುಗಳಸನ್ನು ನೋಡಿಕೊಳ್ಳುತ್ತಿದ್ದರು. ಈ ದಿನ ನ್ಯಾಯಾಲಯಕ್ಕೆ ಚಾಸಾ-1/ಮೂರ್ತೆಪ್ಪ ಬಂದಿರುತ್ತಾರೆ. ಚಾಸಾ-1/ಮೂರ್ತೆಪ್ಪ ಈ ಮೊದಲು ಇಲಕಲ್ಲ ಪಟ್ಟಣದಲ್ಲಿ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಈ ಕಾರಣದಿಂದ ಚಾಸಾ-1 ರವರಿಗೆ ಒಕ್ಕಲುತನ ಕೆಲಸ ಮಾಡಲು ಅನಾನುಕೂಲವಾಗಿತ್ತು ಎಂದರೆ ಸರಿ.

4. 1 ನೇ ಆರೋಪಿ/ಬಸವರಾಜ ರವರ ಮದುವೆ ಚಾಸಾ-43/ನಾಗರತ್ನ ಎನ್ನುವವರ ಜೊತೆ ಮದುವೆ ನಿಶ್ಚಯವಾಗಿತ್ತು ಎಂದರೆ ಸರಿ. ಈ ಕಾರಣಕ್ಕೆ 1 ನೇ ಆರೋಪಿ ಊರಿಗೆ ಬಂದಿದ್ದನು ಎಂದರೆ ಸರಿ.

5. ಶಾಂತಪ್ಪ ಕಾಣೆಯಾದ ಒಂದು ತಿಂಗಳ ನಂತರ ನಾನು ಊರಿಗೆ ಬಂದಿದ್ದಾಗ ನನಗೆ ಶಾಂತಪ್ಪ ಕೊಲೆಯಾದ ವಿಚಾರ ತಿಳಿದು ಬಂತು, ಆದರೆ ಯಾವ ದಿನಾಂಕ ಊರಿಗೆ ಬಂದಿದ್ದೆ ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ, 1 ನೇ ಆರೋಪಿ ಬಳಸುತ್ತಿದ್ದ ಮೊಬೈಲ ಸಿಮ್ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಪೊಲೀಸರು ನನ್ನ ಕಡೆಯಿಂದ ಸದರಿ ಸಿಮ್ ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ.

6. ಸುಮಾರು 4 ವರ್ಷಗಳ ಹಿಂದೆ ನಾನು 1 ನೇ ಆರೋಪಿಗೆ ಸಿಮ್ ಖರೀದಿ ಮಾಡಿ ಕೊಟ್ಟಿದ್ದೆ. 2 ನೇ ಆರೋಪಿ/ಹುಲಗವ್ವ ತನ್ನ ಗಂಡ ಕಾಣೆಯಾದ ವಿಚಾರವಾಗಿ ದೂರು ದಾಖಲಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ 2 ನೇ ಆರೋಪಿ ಆಕೆಯ ಗಂಡನ ಜಮೀನನ್ನು ಆಕೆಗೆ ಕೊಡುವಂತೆ ಚಾಸಾ-1 ಮತ್ತು ಚಾಸಾ-17 ರವರಿಗೆ ಬೇಡಿಕೆ ಇಟ್ಟಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು ಚಾಸಾ-17 ರವರು 2 ನೇ ಆರೋಪಿಗೆ ಆಸ್ತಿ ಕೊಡುವುದಿಲ್ಲ ಎಂದು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಈ ಕಾರಣದಿಂದ 2 ನೇ ಆರೋಪಿತಳ ಮೇಲೆ ಸಿಟ್ಟಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿ ಬಸವರಾಜ 2 ನೇ ಆರೋಪಿಗೆ ಆಸ್ತಿ ಕೊಡುವಂತೆ ಅವರ ಪರವಾಗಿ ಮಾತನಾಡಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು ಚಾಸಾ-17 ರವರು 1 ಮತ್ತು 2 ನೇ ಆರೋಪಿತರ ವಿರುದ್ಧ ಸಿಟ್ಟಾಗಿ ಅವರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ಮೇರೆಗೆ 4 ಮತ್ತು 5 ನೇ ಆರೋಪಿತರ ಹೆಸರು ನನಗೆ ತಿಳಿದು ಬಂದಿತ್ತದೆ.

7. ಉಮೇಶ ಮಾದರ ಎನ್ನುವವರು ಗೋವಾ ರಾಜ್ಯದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಶಾಂತಪ್ಪ ರವರು ಕಾಣೆಯಾದ ಸಮಯದಲ್ಲಿ ಉಮೇಶ ಎನ್ನುವವರು ಗೋವಾ ರಾಜ್ಯದಲ್ಲಿದ್ದರು ಎಂದರೆ ಸರಿ. 1 ನೇ ಆರೋಪಿಗೆ ನಾನು, ಚಾಸಾ-12, 13 ಮತ್ತು 16 ರವರು ಯಾವುದೇ ಬುದ್ಧಿವಾದ ಹೇಳಿರವುದಿಲ್ಲ ಎಂದರೆ ಸರಿಯಲ್ಲ. ಅನೈತಿಕ ಸಂಬಂಧದ ವಿಚಾರವಾಗಿ ಶಾಂತಪ್ಪ ತನ್ನ ಹೆಂಡತಿಯನ್ನು ಊರಿಗೆ ವಾಪಸ್ಸು ಕರೆದುಕೊಂಡು ಬಂದಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಬೈಲ್ ಸಿಮ್ ನಂ. 7776955688 ನ್ನು ನಾನು ಉಪಯೋಗಿಸುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿತರು ಶಾಂತಪ್ಪನನ್ನು ಕೊಲೆ ಮಾಡಿರುತ್ತಾರೆ ಎಂದು ನನಗೆ ಯಾವುದೇ ದಿನಾಂಕ ಮತ್ತು ಯಾ ವುದೇ ವ್ಯಕ್ತಿಗಳಿಂದ ತಿಳಿದು ಬಂದಿರುವುದಿಲ್ಲ ಎಂದರೆ

ಸರಿಯಲ್ಲ. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.